ಕೊಟ್ಟಮೇಲೂ ಕಡಿಮೆ ಬೀಳುತ್ತದೆಂದರೆ ಏನು ಮಾಡುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಜಮೀನು ಅಷ್ಟೇ ಇರುತ್ತದೆ. ಎಷ್ಟಿರುತ್ತದೋ ಅಷ್ಟೇ ಇರುತ್ತದೆ.

ಶ್ರೀ ಕೆ. ಸಿದ್ದಯ್ಯ :- ಎಕ್ಸೆಸ್ ಲ್ಯಾಂಡ್ ಇದ್ದರೆ ಕೊಡಿ, ಇಲ್ಲದಿದ್ದರೆ ಬಿಡಿ.

ಅಧ್ಯಕ್ಷರು :- ಜಮೀನು ಜಾಸ್ತಿ ಮಾಡಿ ಎಂದು ಕೇಳಿ. ಜಾಸ್ತಿ ಮಾಡದಿದ್ದರೆ ಬಡ್ಡೆಟ್ಟಿನಲ್ಲಿ ಪ್ರೊವೈಡ್ ಮಾಡಿ ಎಷ್ಟು ಬೇಕೋ ಅಷ್ಟು ಅಕ್ಟೈರ್ ಮಾಡಿಕೊಡಿ ಎಂದು ಕೇಳಿ ಸರ್ಕಾರದವರು ಇದನ್ನು ಪರಿಶೀಲಿಸಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಲ್ಯಾಂಡ್ ಗ್ರಾಂಟ್ಸ್ ರೂಲ್ಸ್‌ನಲ್ಲಿ 50 ಪರ್ಸೆಂಟ್ ಕೊಡಬೇಕೆಂದಿದ್ದುದನ್ನು 60 ಪರ್ಸೆಂಟ್ ಕೊಡಬೇಕೆಂದು ತಿದ್ದುಪಡಿ ಮಾಡಿದ್ದೇವೆ. ಭೂಸುಧಾರಣಾ ಕಾನೂನಿನಲ್ಲಿ ಕೂಡಾ ತಿದ್ದುಪಡಿ ಮಾಡಿದ್ದೇವೆ. 50 ಪರ್ಸೆಂಟ್ ಇದ್ದುದನ್ನು 70 ಪರ್ಸೆಂಟ್ ಮಾಡಿದ್ದೇವೆ. ಸಪ್ಲಸ್ ಲ್ಯಾಂಡ್‌ನ್ನು ಡಿಸ್ಟ್ರಿಬ್ಯೂಷನ್ ಮಾಡುವಾಗ ಎಸ್.ಸಿ./ಎಸ್.ಟಿ. ಯವರಿಗೆ ಕೊಡಬೇಕೆಂದು ಮಾಡಿದ್ದೇವೆ. ಇನ್ನೊಂದು ಎಸ್.ಸಿ/ಎಸ್.ಟಿ ಕಾರ್ಪೋರೇಷನ್ನವರು ಜಮೀನು ಪರ್ಚೇಸ್ ಮಾಡಿಕೊಂಡು ಎಸ್.ಸಿ/ಎಸ್.ಟಿ ಯವರಿಗೆ ಕೊಡುತ್ತಿದ್ದಾರೆ. ಆದರಲ್ಲಿ ಸಾಕಷ್ಟು ಜನರಿಗೆ ಸಿಗುತ್ತಿದೆ. ಈ ಕಾನೂನಿನ ಅಡಿಯಲ್ಲಿ ಎಷ್ಟು ಸಾಧ್ಯವಿದೆ ಅದನ್ನು ಸಹ ಕೊಡತಕ್ಕ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ಸಿದಯ್ಯ:- ನಾನು ಆ ಕಾನೂನಿನ ಅಡಿಯಲ್ಲಿ ಕೇಳುವುದಿಲ್ಲ. ಇರುವ ಲ್ಯಾಂಡ್ ಕೊಡಿ, ಪರ್ಚೇಸ್ ಆದರೂ ಮಾಡಿಕೊಡಿ. ನೀವು ತಿದ್ದುಪಡಿ ಮಾಡಿದ್ದುದು ಉಂಟೋ ಇಲ್ಲವೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಯಾವ ಕಾನೂನಿಗೆ ತಿದ್ದುಪಡಿ ತನ್ನಿ ಎಂದರೆ ತರುತ್ತೇವೆ.

ಅಧ್ಯಕ್ಷರು:- ನೀವು ಹೇಳಿದ ಹಾಗೆ ಮಾಡುತ್ತಾರೆ, ಯಾವಾಗಲಾದರೂ ಅವರ ಹತ್ತಿರ ಹೋಗಿ.

ಭೂ ಸುಧಾರಣಾ ಕಾಯಿದೆ ಅಡಿಯಲ್ಲಿ ಸಾಲ ಮನ್ನಾ.

144 (1177) ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂ ಸುಧಾರಣಾ ಕಾಯಿದೆ ಅಡಿಯಲ್ಲಿ ರೈತರು ಭೂ ಅಭಿವೃದ್ಧಿ ಬ್ಯಾಂಕಿನಿಂದ ಪಡೆದ ಸಾಲದ ಪರಿಹಾರ ಧನ ರದ್ದು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ರೈತರಿಗೆ ಹಾಗೂ ಸಹಕಾರಿ ಸಂಘಗಳಿಗೆ ಸ್ಪಷ್ಟ ನಿಲುವನ್ನು ನಿರೀಕ್ಷಿಸಬಹುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಭೂ ಸುಧಾರಣಾ ಕಾಯಿದೆ 1961 ಕಲಂ 53ಕ್ಕೆ ತಿದ್ದುಪಡಿತಂದು ಈಗಾಗಲೇ ಪ್ರೀಮಿಯಂ ರದ್ದು ಮಾಡಲಾಗಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಗಂಗಾಧರ ಗೌಡ:- ಭೂ ಸುಧಾರಣಾ ಕಾಯಿದೆ ಅಡಿಯಲ್ಲಿ ರೈತರು ಭೂ ಅಭಿವೃದ್ಧಿ ಬ್ಯಾಂಕಿನಿಂದ ಪಡೆದ ಸಾಲದ ಪರಿಹಾರ ಧನ ರದ್ದು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ಎಂದು ಕೇಳಿದ್ದೇನೆ, ಅದಕ್ಕೆ ಮಂತ್ರಿಗಳು ಭೂ ಸುಧಾರಣಾ ಕಾಯಿದೆ 1961 ಕಲಂ 53ಕ್ಕೆ ತಿದ್ದುಪಡಿ ತಂದು ಈಗಾಗಲೇ ಪ್ರೀಮಿಯಂ ರದ್ದು ಮಾಡಲಾಗಿದೆ ಎಂದು ಉತ್ತರಿಸಿದ್ದಾರೆ. ಆದರೆ ವಾಸ್ತವವಾಗಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ರೈತರಿಂದ ಪ್ರೀಮಿಯಂ ವಸೂಲ್ಮಾಡುತ್ತಿದ್ದಾರೆ. ತಾವು ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಸೂಲ್ಮಾಡಬಾರದೆಂದು ನಾವು ಹೇಳಿದ್ದೇವೆ. ಈಗ ಇನ್ನೊಂದು ಸರ್ಕ್ಯುಲರ್ ಕಳುಹಿಸುತ್ತೇವೆ. 3ಕೋಟಿ ರೂಪಾಯಿಗಳನ್ನು ಪಿಎಲ್‌ಡಿ ಬ್ಯಾಂಕಿನವರಿಗೆ ಸರ್ಕಾರ ಕೊಡತಕ್ಕದ್ದು ಇದೆ. ಬ್ಯಾಂಕಿನವರು

ಪ್ರೀಮಿಯಂ ವಸೂಲ್ಮಾಡಬಾರದೆಂದು ಸೂಚನೆ ನೀಡಿದ್ದರೂ ಅದು ಇಂಪ್ಲಿಮೆಂಟ್ ಆಗಿಲ್ಲವೆಂದು ಹೇಳುತ್ತಿದ್ದಾನೆ. ಅಂಥ ದೂರು ಇದ್ದು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಗಂಗಾಧರ ಗೌಡ:- ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದುದು. ಇವರು ನಿರ್ಣಯ ತೆಗೆದುಕೊಂಡು ಪ್ರೀಮಿಯಂ ರದ್ದುಪಡಿಸಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಒಂದು ವರ್ಷದಿಂದ ನನ್ನ ತಿಳಿವಳಿಕೆ ಪ್ರಕಾರ ಇವತ್ತಿನವರೆಗೆ ರೈತರಿಂದ ಬಲಾತ್ಕಾರವಾಗಿ ಪ್ರೀಮಿಯಂ ವಸೂಲ್ಮಾಡುತ್ತಿದ್ದಾರೆ. ಬ್ಯಾಂಕಿನವರು ಏನು ಹೇಳುತ್ತಿದ್ದಾರೆಂದರೆ, ಸರ್ಕಾರದವರು ಹಣ ತುಂಬಿಲ್ಲ, ಸುಮ್ಮನೆ ಆಶ್ವಾಸನೆ ಕೊಡುತ್ತಿದ್ದಾರೆ, ಅದಕ್ಕೆ ನಾವು ಹೊಣೆಗಾರರಲ್ಲವೆಂದು ಹೇಳುತ್ತಿದ್ದಾರೆ. ಇದರಿಂದ ರೈತರು ಕಷ್ಟಕ್ಕೆ ಒಳಗಾಗಿದ್ದಾರೆ. ಆ ಆಶ್ವಾಸನೆಯಿಂದ ನಮಗೆ ಲಾಭವಾಗುತ್ತದೆಂದು ತಿಳಿದುಕೊಂಡಿದ್ದೇನೆ, ಮಂತ್ರಿಗಳ ಆಶ್ವಾಸನೆಯನ್ನು ನಂಬಿದ್ದೇನೆ. ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು. ಇನ್ನು ಸರ್ಕುಲರ್ ಕಳುಹಿಸುತ್ತೇವೆಂದರೆ ಒಂದೆರಡು ವರ್ಷವಾಗುತ್ತದೆ, ಅಷ್ಟರಲ್ಲಿ ಅವರಿಂದ ವಸೂಲ್ಮಾಡಿ ಆಗುತ್ತದೆ. ಇದಕ್ಕೆ ಕಂದಾಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ಸರ್ಕಾರದಿಂದ ಕೊಡತಕ್ಕ ಹಣವನ್ನು ಬ್ಯಾಂಕಿಗೆ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಾನು ಈಗಾಗಲೇ ಹೇಳಿದ್ದೇನೆ, ಅಮೆಂಡ್‌ಮೆಂಟ್ ಆದ ಮೇಲೆ ಪ್ರೀಮಿಯಂ ವಸೂಲ್ಮಾಡಬಾರದೆಂದು ಸುತ್ತೋಲೆ ಕಳುಹಿಸಿದ್ದೇವೆ. Accordingly Sec. 53 of KLR Act 61 was amended by Act No.19 of 1986 with effect from 17-10-84. ಮತ್ತೆ ಫರ್ದರ್ ಅಮೆಂಡ್‌ಮೆಂಟ್ ಮಾಡಿ ಇದು ಸಂಪೂರ್ಣ (ಡಿ) ಕ್ಲಾಸ್ ಲ್ಯಾಂಡ್ ಇರತಕ್ಕಮ್ಮ, ಹತ್ತು ಎಕರೆಗೆ ಪ್ರೀಮಿಯಂ ಎಕ್ಸಮ್ಪ್ಟ್ ಮಾಡುತ್ತೇವೆಂದು ಹೇಳಿದ್ದೇವೆ. ದೂರು ಏನಾದರೂ ಇದ್ದರೆ ಹೇಳಿ, ಖಂಡಿತ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಗಂಗಾಧರ ಗೌಡ:- ಇದು ಡಿಸಿ. ಯವರ ಹತ್ತಿರ ಮಾತನಾಡುವ ವಿಚಾರ ಅಲ್ಲ, ಸರ್ಕಾರದವರು ಬ್ಯಾಂಕಿಗೆ ಹಣ ತುಂಬಿಸಬೇಕು. ಹಣ ತುಂಬಿಸದೆ ಬರೀ ಸರ್ಕುಲರ್ ಕಳುಹಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಸಹಕಾರ ಇಲಾಖೆಯವರೊಡನೆ ಮಾತನಾಡಿ ಹಣ ತುಂಬಿ ಇವರು ಕೊಟ್ಟ ಮಾತನ್ನು ನಡೆಸಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಆಗಲೇ ಹೇಳಿದ್ದೇನೆ. ಡ್ಯೂ ಇರತಕ್ಕದ್ದು 3 ಕೋಟಿ 15 ಲಕ್ಷ ರೂಪಾಯಿ ಪಿಎಲ್‌ಡಿ. ಬ್ಯಾಂಕಿಗೆ ನಾವು ನೇರವಾಗಿ ತುಂಬತಕ್ಕ ಹಣ ಇದು. ಇದರ ಜವಾಬ್ದಾರಿ ಸರ್ಕಾರಕ್ಕೆ ಇದೆ. ತಾವು ಅನೇಕ ಸಲ ಬರುತ್ತಿರುತ್ತೀರಿ, ನನಗೆ ಹೇಳಿದ್ದರೆ ತಕ್ಷಣ ಫೋನ್ ಮಾಡಿ ತಿಳಿಸುತ್ತಿದ್ದೆ. ಆದರೆ ಇವತ್ತು ಹೊಸದಾಗಿ ಪ್ರಸ್ತಾಪ ಮಾಡುತ್ತಿದ್ದೀರಿ. 3 ಕೋಟಿ 15 ಲಕ್ಷ ರೂಪಾಯಿ ಸರ್ಕಾರದಿಂದ ತುಂಬುವಂತೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆ ಮಾತನಾಡಿ ಇದನ್ನು ಸೆಟ್‌ರೈಟ್ ಮಾಡತಕ್ಕ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್:- ಗಂಗಾಧರ ಗೌಡರು ಕೇಳಿದ ಹಾಗೆ ಅತೀ ಸಣ್ಣ ರೈತರು ಎರಡು ಎಕರೆ ಜಮೀನು ಭೂಸುಧಾರಣೆಯಲ್ಲಿ ಯಾರಿಗೆ ಬಂದಿತ್ತು ಅಂಥವರು ಎರಡು ಸಾವಿರ ರೂಪಾಯಿಗಳನ್ನು ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಪಡೆದು ಅವನ್ನು ಕಟ್ಟಿ ಪಟ್ಟಾ ಪಡೆದಿದ್ದಾರೆ. ಅಂಥವರದು ಮನ್ನಾ ಆಗಿಲ್ಲ, ಪ್ರೀಮಿಯಂ ಮನ್ನಾ ಆಗಿದೆ ಎಂದು ಏನು ಹೇಳುತ್ತಾರೆ ಆದರೂ ಕೆಲವು ತಾಲ್ಲೂಕುಗಳಲ್ಲಿ ಇನ್ನೂ ವಸೂಲು ಮಾಡುತ್ತಿದ್ದಾರೆ. ಉದಾಹರಣೆಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ವಸೂಲು ಮಾಡಿದ್ದಾರೆ. ಭೂಸುಧಾರಣೆಯಲ್ಲಿ ಪಡೆದಿರತಕ್ಕ ಎರಡು ಎಕರೆ ಹೊಂದಿರತಕ್ಕ ಸಣ್ಣ ರೈತರಿಗೆ ವಸೂಲು ಮಾಡತಕ್ಕ ಹಿಂಸೆಯನ್ನು ಭೂ ಅಭಿವೃದ್ಧಿ ಬ್ಯಾಂಕಿನವರು ಕೊಡುತ್ತಿದ್ದಾರೆ. ಈಗ ಮಂತ್ರಿಗಳು ಅದು ರದ್ದು ಮಾಡುತ್ತೇವೆ, ದುಡ್ಡು ಕಟ್ಟಿಸುತ್ತೇವೆ ಎಂದು ಆಜ್ಞೆ ಕೊಟ್ಟಿದ್ದಾರೆ. ಅದಕ್ಕೆ ನಾನು ಅಭಿನಂದಿಸುತ್ತೇನೆ.

ಪರಿಶಿಷ್ಟ ಜಾತಿಗೆ ಸೇರಿದ ಮೀನುಗಾರರಿಗೆ ವಸತಿ ಗೃಹ

145 (578) ಶ್ರೀ ಮನೋಹರ ಉಮಾಕಾಂತ ಐನಾಪುರ (ಬೆಳ್ಳಿ):- ಮುನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇಂಡಿ ತಾಲ್ಲೂಕು, ಬೆಳ್ಳುಬ್ಬಿ ಕ್ಷೇತ್ರದ ಪರಿಶಿಷ್ಟ ಜಾತಿ ಮೀನುಗಾರರಿಗೆ ವಸತಿ ಗೃಹಗಳನ್ನು ನಿರ್ಮಿಸಿಕೊಡುವ ಪ್ರಸ್ತಾವನೆ ಇರುವುದು ನಿಜವೇ?